ಅನುಭವಿಸುತ್ತಿರಬೇಕು. ಮನಃಸಾಕ್ಷಿ ಹೇಳಿದಂತೆ ಕೇಳುವೆ ಎಂದು ಅನಿಸಿದರೆ. ನಾಳೆ ಬೆಳಗ್ಗೆ ಜಯನಗರ ಪೊಲೀಸ್ ಸ್ಟೇಶನ್‌ಗೆ ಬಂದು ಸರ್ಕಲ್ ಇನ್‌ಸ್ಪೆಕ್ಟರ್ ಮುಂದೆ ತಪ್ಪು ಒಪ್ಪಿಕೊಳ್ಳಿ. ಮಿಕ್ಕಿದ್ದು ನಿಮ್ಮ ಇಷ್ಟ!"

ಒಂದೆರಡು ಕ್ಷಣ ಇಡೀ ಪ್ರಪಂಚವೇ ಸ್ತಬ್ಧವಾಗಿದೆ ಎಂದು ಅನಿಸಿತು ಕಾಮತ್‌ಗೆ. ಎಚ್ಚರ ಬಂದಾಗ ನಾಗರಾಜಯ್ಯ ಅಲ್ಲಿರಲಿಲ್ಲ.

★★★

ಮಾರನೇ ದಿನ ಸುಮಾರು ಹತ್ತು ಗಂಟೆಗೆ ಸೂರ್ಯ ಕಾಮತ್ ಜಯನಗರ ಪೊಲೀಸ್ ಸ್ಟೇಶನ್‌ನಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಮುಂದೆ ಕುಳಿತು ತನ್ನೆಲ್ಲ ತಪ್ಪನ್ನು ಒಪ್ಪಿಕೊಳ್ಳುತ್ತಾ, "ಚಾರ್ಜ್ ಶೀಟ್ ಹಾಕಿ ಸಾರ್. ನನ್ನ ತಪ್ಪನ್ನು ಒಪ್ಪಿಕೊಂಡು ನಾನು ಸಹಿ ಹಾಕುತ್ತೇನೆ" ಎಂದ.

"ನಿಜಕ್ಕೂ ನೀವು ದೊಡ್ಡವರು. ನಮ್ಮ ಬಳಿ ನೀವೇ ಅಪರಾಧಿ ಅಂತಾ ಪ್ರೂವ್ ಮಾಡಲು ಯಾವ ಸಾಕ್ಷಿಯೂ ಇರಲಿಲ್ಲ. ಅಂಥದರಲ್ಲಿ ನೀವೇ ಬಂದು ತಪ್ಪನ್ನು ಒಪ್ಪಿಕೊಳ್ಳುವ ನಿಮ್ಮ ದೊಡ್ಡ ಗುಣ ಮೆಚ್ಚಬೇಕು."

"ಅದಕ್ಕೆಲ್ಲ ಕಾರಣ ನಿಮ್ಮ ಇನ್‌ಸ್ಪೆಕ್ಟರ್ ನಾಗರಾಜಯ್ಯ" ಎಂದು ನಿರ್ವಿಕಾರವಾಗಿ ನುಡಿದ.

"ನಿಜ! ಈ ಕೇಸ್ ಬಗ್ಗೆ ತುಂಬಾ ತಲೆಕೆಡಿಸಿಕೊಂಡಿದ್ದರು. ಅವರಿಗೆ ನೀವೇ ಅಪರಾಧಿ ಅಂತಾ ಫೀಲಿಂಗ್. ಆದರೆ ಪ್ರೂವ್ ಮಾಡಲು ಆಗಲಿಲ್ಲ ಎಂಬ ಕೊರಗು ಬಹಳ ಇತ್ತು. ನಿನ್ನೆ ಬಂದು ನೀವು ತಪ್ಪು ಒಪ್ಪಿಕೊಂಡಿದ್ದರೆ ಈ ಕೇಸ್‌ನ ಕ್ರೆಡಿಟ್ ಅವರಿಗೇ ಕೊಡಬಹುದಿತ್ತು. ಆ ಅದೃಷ್ಟ ಅವರಿಗಿಲ್ಲ" ಭಾರವಾದ ಧ್ವನಿಯಲ್ಲಿ ನುಡಿದ ಸರ್ಕಲ್ ಇನ್‌ಸ್ಪೆಕ್ಟರ್.

"ಅಂದರೆ ನಿನ್ನೆಯೇ ಅವರು ರಿಟೈರ್ ಆದರಾ?"

"ಇಲ್ಲ... ನಿನ್ನೆ ಮಧ್ಯಾಹ್ನ ರಸ್ತೆ ಅಪಘಾತದಲ್ಲಿ ಅವರು ತೀರಿಕೊಂಡರು. ಯಾವುದೋ ಲಾರಿ ಗುದ್ದಿ ಸ್ಥಳದಲ್ಲಿಯೇ ಸತ್ತುಹೋದರು. ನಿಮ್ಮ ಕೇಸ್ ಅವರ ಲಾಸ್ಟ್ ಕೇಸ್ ಆಗಿತ್ತು."

"ಹಾಗಾದರೆ ನಿನ್ನೆ ಸಾಯಂಕಾಲ ನಮ್ಮ ಮನೆಗೆ ಬಂದಿದ್ದು? ನನ್ನೊಡನೆ ಮಾತಾಡಿದ್ದು? ನನ್ನನ್ನು ಅಪರಾಧಿ ಎಂದು ಒಪ್ಪಿಕೊಳ್ಳುವಂತೆ ಮಾಡಿದ್ದು?"

ಆ ಡೊಳ್ಳು ಹೊಟ್ಟೆ... ಹಳದೀ ಹಲ್ಲುಗಳು... ಆ ಕಪಟ ನಗು... ಅವನ ಕಡೆಯ ಮಾತುಗಳು... ಅದೆಲ್ಲಕ್ಕಿಂತ ಹೆಚ್ಚಾಗಿ ಆ ಕಣ್ಣುಗಳು! ಎಲ್ಲ ನೆನಪಾಗಿ ಕೂತಲ್ಲಿಯೇ ಕುಸಿದ ಸೂರ್ಯ ಕಾಮತ್.

## ವಾಸುದೇವ ಮೂರ್ತಿ ಪಿ.

ಹುಟ್ಟಿದ ಊರು ಶಿವಮೊಗ್ಗ. ಬೆಂಗಳೂರಿನಲ್ಲಿ ಸಿವಿಲ್ ಎಂಜಿನಿಯರ್ ವೃತ್ತಿ. ಸಂವಹನ ಕಲೆ ಮತ್ತು ಇತರ ವೃತ್ತಿಪರ ಕೌಶಲ್ಯಗಳಿಗೆ ತರಬೇತಿ ಕೊಡುವ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ. ಮೊದಲಿನಿಂದಲೂ ಪತ್ತೇದಾರಿ ಸಾಹಿತ್ಯದ ಬಗ್ಗೆ ಆಸಕ್ತಿ. ಪತ್ತೇದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯ, ಟಿ.ಕೆ. ರಾಮರಾವ್ ಅವರ ಕಾದಂಬರಿಗಳಿಂದ ಶುರುವಾದ ಓದುವ ಆಸಕ್ತಿ ಬಳಿಕ ಬರವಣಿಗೆಯತ್ತ ಹೊರಳಿಕೊಂಡಿದೆ.